ರಥವಾನೇರಿದ  ರಾಘವೇಂದ್ರ

ರಚನೆ : ಗೋಪಾಲದಾಸರು

ರಾಗ : ಪೂರ್ವಿ

ತಾಳ : ಆದಿ

ಸತತ ಮಾರ್ಗದಿ  ಸಂತತ ಸೇವಿಪರಿಗೆ | ಅತಿ
ಹಿತದಲಿ ಮನೋರಥವ ಕೊಡುವೆನೆಂದು ||ಪ ||

ರಥವಾನೇರಿದ  ರಾಘವೇಂದ್ರ |
ಸದ್ಗುಣಗಳ  ಸಾಂದ್ರ       ||ಅ.ಪ ||

ಚತುರ ದಿಕ್ಕು ವಿದಿಕ್ಕುಗಳಲ್ಲಿ |
ಚರಿಪಾಜನರಲ್ಲಿ ಮಿತಿಯಿಲ್ಲದೆ ಬಂದು ಓಲೈಸುತಲಿ |
ವರವಾ  ಬೇಡುತಲಿ ನುತಿಸುತ ಪರಿಪರಿ ನತರಾಗಿಹರಿಗೆ
ಗತಿಪೇಳದೆ  ಸರ್ವಥಾ  ನಾ ಬಿಡೆನೆಂದು||೧||

ಅತುಳ  ಮಹಿಮಾನಾ ದಿನದಲ್ಲಿ |
ದಿತಿಜಾವಂಶದಲಿ ಉತ್ಪತ್ತಿಯಾಗಿ ಉಚಿತದಲ್ಲಿ |
ಉತ್ತಮ ರೀತಿಯಲ್ಲಿ ಅತಿಶಯವಿರುತಿರೆ  ಪಿತನ ಭಾದೆಗಳು

ಅತಿಶಯವಿರುತಿರೆ ಪಿತನ ಭಾದೆಗೆ ಮನ್ಮಥ  ಪಿತನೊಲಿಸಿದ
ಜಿತ ಕರುಣದಲಿ||೨||

ಪ್ರಥಮ ಪ್ರಹ್ಲಾದ ವ್ಯಾಸಮುನಿಯೆ |
ಯತಿರಾಘವೇಂದ್ರ ....  ಗುರುರಾಘವೇಂದ್ರ
ಪತೀತರೋದ್ಧಾರಿಯೇ  ಪಾವನಕಾರಿಯೇ |
ಕರಮುಗಿವೆನು  ದೊರೆಯೆ ಕ್ಷಿತಿಯೊಳು  ಗೋಪಾಲವಿಠಲನ
ಸ್ಮರಿಸುತ ....... ವಿಠಲ .... ಗೋಪಾಲವಿಠಲ
ಪ್ರತಿ  ಮಂತ್ರಾಲಯದೊಳು   ಅತಿ  ಮೆರೆವ||೩||